
ಮೊದಲ ದಿನ ಶಾಲೆಗೆ ಬಂದಿದ್ದ ಏಳು ಹುಡುಗರಲ್ಲಿ ಅವನೂ ಒಬ್ಬನಾಗಿದ್ದ. ಎಷ್ಟೋ ಗೆಳೆಯರು ನಾವು ಶಾಲೆ ಪ್ರಾರಂಭದ ದಿನ ಬರುವುದಿಲ್ಲಪ್ಪ. ಆ ದಿನ ಶಾಲೆಯ ಕಸಗುಡಿಸಿ ಸ್ವಚ್ಛ ಮಾಡುವುದೇ ಕೆಲಸ ಎಂದು ಹೇಳುತ್ತಾ ಮೊದಲ ದಿನ ಬಂದಿರಲಿಲ್ಲ. ಶಾಲೆಗೆ ಬಂದಿರುವ ಏಳು ಮಕ್ಕಳೊಂದಿಗೆ ಹೆಡ್ ಸರ್ ಹಾಗೂ ಸರಳಾ ಟೀಚರ್ ತಾರಾ ಟೀಚರ್ ಎಲ್ಲಾ ಸೇರಿ ಶಾಲೆಯನ್ನು ಸ್ವಚ್ಛಗೊಳಿಸುತ್ತಿದ್ದರು. ರವಿಗೆ ಹೆಡ್ ಸರ್ ಕೂಡಾ ತಮ್ಮೊಂದಿಗೆ ಪ್ರೀತಿಯಿಂದ ಬೆರೆಯುತ್ತಾ ಕೆಲಸ ಮಾಡುವುದನ್ನು ನೋಡಿ ತುಂಬಾ ಖುಷಿಯಾಗುತ್ತಿತ್ತು. ಶಾಲೆ ಶುರುವಾಗಿ ವಾರವಾಗಿರಬೇಕು ಎಂದೆನಲ್ಲ ಆ ದಿನ ಸರಳಾ ಟೀಚರ್ ಏನೋ ಪಾಠ ಮಾಡುತ್ತಿದ್ದರು...

ರವಿ ಈಗ ಆರನೇ ತರಗತಿ. ಅವನು ಮುಂದಿನ ಬೆಂಚನ್ನು ಹಿಡಿದು ಕುಳಿತಿದ್ದ. ಅವನ ಪಕ್ಕದಲ್ಲಿ ಶಶಾಂಕ ಕುಳಿತಿರುತ್ತಾನೆ. ಶಶಾಂಕ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರ ಮಗ. ಶಶಾಂಕನಿಗೆ ರವಿಯನ್ನು ಕಂಡರೆ ತುಂಬಾ ಪ್ರೀತಿ. ರವಿ ಎಲ್ಲದರಲ್ಲೂ ಮುಂದು. ಟೀಚರ್ ಪಾಠ ಮುಗಿಸಿದ ತಕ್ಷಣ ಅವರು ಏನೆಲ್ಲಾ ಅಭ್ಯಾಸ ಹೇಳುತ್ತಾರೋ ಅದನ್ನೆಲ್ಲ ಮಾಡಿ ಮುಗಿಸಿಬಿಡುತ್ತಿದ್ದ. ಶಶಾಂಕ ರವಿಯ ನೋಟ್ ಬುಕ್ ತೆಗೆದುಕೊಂಡು ಸುಲಭವಾಗಿ ಎಲ್ಲವನ್ನೂ ಬರೆದುಕೊಂಡು ಬಿಡುತ್ತಿದ್ದ. ಸರ್ ಗಣಿತ ಕೊಟ್ಟರೆ ರವಿ ಮಾಡುವುದನ್ನು ಓರೆಗಣ್ಣಿನಲ್ಲಿ ನೋಡಿ ಬರೆದುಬಿಡುತ್ತಿದ್ದ. ಹಾಗಾಗಿ ರವಿಯೊಂದಿಗೆ ಶಶಾಂಕನೂ ಚೆನ್ನಾಗಿ ಓದುತ್ತಾನೆ ಎಂದು ಹೆಡ್ ಸರ್ ಎಲ್ಲಾ ಭಾವಿಸಿದ್ದರು. ಅವನ ಬಗ್ಗೆ ನಿಜವಾದ ಅರಿವು ಸರಳಾ ಟೀಚರಿಗೆ ಇತ್ತಾದರೂ ಅವನ ತಂದೆ ಅಧ್ಯಕ್ಷರಾದ್ದರಿಂದ ಅವರು ಹೆಚ್ಚಿಗೆ ಏನೂ ಹೇಳದೆ ಹೊಗಳಿ ಸುಮ್ಮನಾಗುತ್ತಿದ್ದರು.

ಸರಳಾ ಟೀಚರ್ ಪಾಠ ಮಾಡುತ್ತಿದ್ದಾಗಲೇ ಏಳನೇ ತರಗತಿಯ ಅಣ್ಣನೊಬ್ಬ 'ಹೆಡ್ ಸರ್ ರವಿಯನ್ನು ಕರೆಯುತ್ತಿದ್ದಾರೆ' ಎಂದು ಹೇಳಿ ಹೋದ. ರವಿಗೆ ಸರ್ ಏಕೆ ಕರೆಯುತ್ತಿರಬಹುದು ಎಂದು ಕುತೂಹಲವಾಯಿತು. ಟೀಚರ್ ಹೋಗು ಎಂದರು. ರವಿ ಹೆಡ್ ಸರ್ ಮುಂದೆ ನಿಂತಿದ್ದ... ನೀನು ತಕ್ಷಣ ಮನೆಗೆ ಬರಬೇಕಂತೆ, ನಿನ್ನ ಅಪ್ಪ ಕೆಲಸಕ್ಕೆ ಹೋದ ಮನೆಯ ಹೆಗಡೆಯವರು ನನಗೆ ಫೋನ್ ಮಾಡಿ ಹೇಳಿದರು. ತಡ ಮಾಡದೆ ನಿನ್ನ ಕೇರಿಯ ಎರಡು ಮಕ್ಕಳನ್ನು ನಿನ್ನ ಜೊತೆಗೆ ಕರೆದುಕೊಂಡು ಹೋಗು ಎಂದರು. ಅಪ್ಪ ಫೋನ್ ಮಾಡದೆ ಹೆಗಡೆಯವರು ಯಾಕೆ ಫೋನ್ ಮಾಡಿದರು... ಎಂದೆಲ್ಲ ರವಿಗೆ ಯೋಚನೆ ಬಂತು. ಸರ್ ಕೂಡ ಸ್ವಲ್ಪ ಗಾಬರಿಯಾದಂತೆ ಅನಿಸಿತು. ಅವನು ನಿಂತೇ ಇದ್ದ. 'ಹೋಗು ಹೋಗು ತಡ ಮಾಡಬೇಡ' ಎಂದಾಗ... ಯಾರನ್ನೂ ಕರೆಯದೆ ತಾನೊಬ್ಬನೇ ಗಡಿಬಿಡಿಯಿಂದ ಮನೆಗೆ ಓಡಿದ.

ರವಿ ಮನೆ ಹತ್ತಿರ ಬರುತ್ತಿದ್ದಂತೆ ಕೇರಿಯವರೆಲ್ಲ ಮನೆಯ ಮುಂದೆ ಗುಂಪುಗೂಡಿರುವುದು ಕಂಡಿತು. ಅವರೆಲ್ಲ ದೊಡ್ಡದಾಗಿ ಅಳುತ್ತಿರುವುದು ಕೇಳಿಸಿತು. ರವಿ ಗಡಿಬಿಡಿಯಿಂದ ಜನರ ಸಂಧಿಯಲ್ಲಿ ತೂರಿ ಮುಂದೆ ಬಂದು ನೋಡಿದರೆ ಅಪ್ಪನನ್ನು ಮಲಗಿಸಿದ್ದರು. ಅಮ್ಮ ಅಜ್ಜಿ ದೊಡ್ಡದಾಗಿ ಅಳುತ್ತಿದ್ದರು. ರವಿಯನ್ನು ಕಂಡಾಗ ಅವರ ಅಳು ಇನ್ನೂ ಹೆಚ್ಚಾಯಿತು. ತಕ್ಷಣ ರವಿಗೆ ಏನೂ ತಿಳಿಯಲಿಲ್ಲ... ಅಡಕೆ ಮರಕ್ಕೆ ಔಷಧಿ ಸಿಂಪಡಿಸಲು ಹೋಗಿದ್ದ ಅಪ್ಪ ಮರದಿಂದ ಕೆಳಗೆ ಬಿದ್ದಿದ್ದ. ಅಪ್ಪ ಬದುಕಿಲ್ಲ... ಎಂಬುದೆಲ್ಲ ನಂತರ ತಿಳಿಯಿತು. ರವಿಗೆ ಅಪ್ಪನ ನೆನಪು ಪದೇ ಪದೇ ಬರುತ್ತಾ ಇರುತ್ತದೆ. ಆಗೆಲ್ಲ ಮತ್ತೆ ಮತ್ತೆ ಕಣ್ಣು ಒದ್ದೆ ಆಗುತ್ತಿರುತ್ತದೆ.



ರವಿ ಇಂದು ಶಾಲೆಗೆ ಹೋಗಲೇಬೇಕು ಎಂದುಕೊಂಡಿದ್ದ ಎಂದೆನಲ್ಲ... ಅವನ ಅಜ್ಜಿ ಆರಾಮಿಲ್ಲದೆ ಮಲಗಿದ್ದಾಳೆ. ತಾಯಿ ಒಂದು ತಿಂಗಳ ಪುಟ್ಟ ತಂಗಿಯನ್ನು ಬಿಟ್ಟು ಎಲ್ಲಿಗೂ ಕೆಲಸಕ್ಕೆ ಹೋಗುತ್ತಿಲ್ಲ. ಅಪ್ಪ ಸತ್ತ ಮೇಲೆ ಅಜ್ಜಿ ಊರಿನ ಗೌಡರೊಬ್ಬರ ಮನೆಯ ದನದ ಕೊಟ್ಟಿಗೆ ಸ್ವಚ್ಛ ಮಾಡುವುದು, ನಂತರ ಅವರ ಮನೆಯನ್ನು ಗುಡಿಸಿ ಪಾತ್ರೆ ತೊಳೆದು ಬರುವ ಕೆಲಸ ಮಾಡಲು ತೊಡಗಿದ್ದಾರೆ. ಅಪ್ಪ ಸತ್ತಾಗ ತಂಗಿ ಇನ್ನೂ ಅಮ್ಮನ ಹೊಟ್ಟೆಯಲ್ಲಿಯೇ ಇದ್ದಳು. ತಂಗಿ ಬಂದು ಈಗ ಒಂದು ತಿಂಗಳಾಯಿತು ಅಷ್ಟೇ. ಪುಟ್ಟ ತಂಗಿಯನ್ನು ನೋಡಿ ರವಿಗೆ